**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಜೇವರ್ಗಿ**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ 166/2020**

**ಚಾ.ಸಾ- 11**

**ಪ್ರಾ.ಸಾ - 4**

**ಸಾಕ್ಷಿಗೆ ದಿನಾಂಕ 06-03-2025ರಂದು ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | ಃ | ಡಾಃ ಶಿವಲಿಂಗಪ್ಪ |
| ತಂದೆಯ ಹೆಸರು | ಃ | ವೀರಣ್ಣಗೌಡ ಪಾಟೀಲ |
| ವಯಸ್ಸು | ಃ | 63 ವರ್ಷ |
| ಉದ್ಯೋಗ | ಃ | ಗುತ್ತಿಗೆ ಆಧಾರದ ಮೇಲೆ ವೈದ್ಯಾಧಿಕಾರಿ, ಜೇವರ್ಗಿ ಸರಕಾರಿ ಆಸ್ಪತ್ರೆ |
| ವಾಸಸ್ಥಳ | ಃ | ಕಲ್ಬುರ್ಗಿ |

**ಮುಖ್ಯವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ದಿಃ 2019 ರಿಂದ ಇಲ್ಲಿಯವರೆಗೆ ಸಾರ್ವಜನಿಕ ಆಸ್ಪತ್ರೆ, ಜೇವರ್ಗಿಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 05-04-2019 ರಂದು ಬೆಳಿಗ್ಗೆ 09-50 ಗಂಟೆಗೆ ಸಮಯದಲ್ಲಿ ಹಲ್ಲೆ ಹಿನ್ನೆಲೆಯಲ್ಲಿ ಅಮಲಮ್ಮ ಗಂಡ ಅಂಬ್ಲಪ್ಪ , ಈರಮ್ಮ ಗಂಡ ಸಂಗಪ್ಪ ಹಾಗೂ ನಿಂಗಣ್ಣ ತಂದೆ ಅಂಬ್ಲಪ್ಪರವರು ಆಸ್ಪತ್ರೆಗೆ ಬಂದಿದ್ದು ಅವರನ್ನು ಪರೀಕ್ಷಿಸಿ ಚಿಕಿತ್ಸೆ ನೀಡಿದ್ದು ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತವೆ.

**ಚಾಸಾ-1 ಈರಮ್ಮರವರಿಗೆ**

ಬೆನ್ನು ಮತ್ತು ಹೊಟ್ಟೆಯ ಮೇಲೆ ಒಳಪೆಟ್ಟು ಆಗಿತ್ತು. ಸದರಿ ಗಾಯ ಸಾಮಾನ್ಯ ಸ್ವರೂಪದ ಗಾಯವಾಗಿತ್ತು ಸದರಿ ಗಾಯದ ಅವಧಿ 5 ರಿಂದ 6 ಗಂಟೆವರೆಗಿನ ಗಾಯವಾಗಿತ್ತು.

**ಚಾಸಾ-4 ನಿಂಗಣ್ಣರವರಿಗೆ**

1) ನೆತ್ತಿಯ ಮೇಲೆ ಹರಿದ ಗಾಯವಿತ್ತು.

2) ಬಲಭುಜದ ಮೇಲೆ ತರಚಿದ ಗಾಯವಿತ್ತು.

ಮೇಲ್ಕಂಡ ಗಾಯಗಳು ಸಾಮಾನ್ಯ ಸ್ವರೂಪದ ಗಾಯವಾಗಿರುತ್ತವೆ. ಸದರಿ ಗಾಯದ ಅವಧಿ 5 ರಿಂದ 6 ಗಂಟೆವರೆಗಿನ ಗಾಯವಾಗಿತ್ತು.

**ಚಾಸಾ-5 ಅಂಬ್ಲಮ್ಮರವರಿಗೆ**

ಬಲಗೈ ಮೇಲೆ ಒಳಪೆಟ್ಟು ಮತ್ತು ಬೆನ್ನಿನ ಮೇಲೆ ಒಳಪೆಟ್ಟು ಆಗಿತ್ತು. ಸದರಿ ಗಾಯಗಳಿಗೆ ಚಿಕಿತ್ಸೆ ನೀಡಿ ಡ್ರೆಸಿಂಗ್ ಮಾಡಿರುತ್ತೇನೆ. ಸದರಿ ಗಾಯಗಳು ಸಾಮಾನ್ಯ ಸ್ವರೂಪದ ಗಾಯವಾಗಿರುತ್ತವೆ. ಸದರಿ ಗಾಯದ ಅವಧಿ 5 ರಿಂದ 6 ಗಂಟೆವರೆಗಿನ ಗಾಯವಾಗಿತ್ತು.

ನಾನು ಚಾಸಾ ರವರಿಗೆ ಚಿಕಿತ್ಸೆ ನೀಡಿದ ಬಗ್ಗೆ ಗಾಯದ ಪ್ರಮಾಣ ಪತ್ರಗಳನ್ನು ನೀಡಿರುತ್ತೇನೆ.

ಚಾಸಾ-1ರವರಿಗೆ ನೀಡಿದ ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ನಿಪಿ-2 ಎಂದು ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಚಾಸಾ-4ರವರಿಗೆ ನೀಡಿದ ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ನಿಪಿ-3 ಎಂದು ಸಾಕ್ಷಿ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ಚಾಸಾ-5ರವರಿಗೆ ನೀಡಿದ ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ನಿಪಿ-4 ಎಂದು ಸಾಕ್ಷಿ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

ನಿಪಿ-2ರಲ್ಲಿ ನಮೂದಿಸಿದಂತಹ ಗಾಯಗಳು ಸಾಮಾನ್ಯವಾಗಿ ಬಡಿಗೆಯಿಂದ ಹೊಡೆದರೆ ಹಾಗೂ ನಿಪಿ-3ರಲ್ಲಿ ನಮೂದಿಸಿದಂತಹ ಗಾಯಗಳು ಸಾಮಾನ್ಯವಾಗಿ ಬಡಿಗೆಯಿಂದ ಆಗುವ ಸಾಧ್ಯತೆ ಇದೆ. ನಿಪಿ-4 ರಲ್ಲಿ ನಮೂದಿಸಿದಂತಹ ಗಾಯಗಳು ಸಾಮಾನ್ಯವಾಗಿ ಬಡಿಗೆಯಿಂದ ಹೊಡೆದರೆ ಆಗುವ ಸಾಧ್ಯತೆ ಇದೆ ಎಂದರೆ ಸಾಕ್ಷಿ ಜೋರಾಗಿ ಹೊಡೆದರೆ ಒಳಪೆಟ್ಟು ಹಾಗೂ ನಿಧನವಾಗಿ ಹೊಡೆದರೆ ಹೊರಪೆಟ್ಟು ಆಗುವ ಸಾಧ್ಯತೆ ಇದೆ ಎಂದು ನುಡಿಯುತ್ತಾರೆ.

**ಪಾಟೀ ಸವಾಲುಃ ಶ್ರೀ ಕೆ.ಇ.ಬಿ. ಆರೋಪಿ ಪರ ವಕೀಲರಿಂದ**

ನಿಪಿ 2 ರಿಂದ 4ರಲ್ಲಿ ಗಾಯಗಳ ಅವಧಿ ನಮೂದಿಸಿಲ್ಲ ಎಂದರೆ ನಿಜ. ಸಾಮಾನ್ಯವಾಗಿ ಮನೆಯಲ್ಲಿ ಕಾಲು ಜಾರಿ ಹಾಗೂ ಜೋರಾಗಿ ನೆಲದ ಮೇಲೆ ಬಿದ್ದಂತಹ ಸಮಯದಲ್ಲಿ ನಿಪಿ-2 ರಿಂದ 4 ರಲ್ಲಿ ತೋರಿಸಿದಂತಹ ಗಾಯಗಳಾಗುವ ಸಾಧ್ಯತೆ ಇದೆ ಎಂದರೆ ಸಾಕ್ಷಿ ಒಬ್ಬರು ಇಬ್ಬರಿಗೆ ಆಗಬಹುದು

ಆದರೆ 3 ಜನರಿಗೆ ಆಗುವ ಸಾಧ್ಯತೆ ಇಲ್ಲ ಎಂದು ನುಡಿಯುತ್ತಾರೆ. ನಿಂಗಣ್ಣನಿಗೆ ಹೇಳಿದಂತಹ ಗಾಯಗಳು ಸಾಮಾನ್ಯವಾಗಿ ಒಂದು ಗಿಡದ ಟೊಂಗೆ ತಲೆಗೆ ತಾಗಿದರೆ ಆಗುವ ಸಾಧ್ಯತೆ ಇದೆ ಎಂದರೆ ನಿಜ. ಯಾವುದೇ ಗಾಯಾಳುಗಳು ನನಗೆ ಭೇಟಿ ಆಗಿಲ್ಲ ನಾನು ಅವರಿಗೆ ಚಿಕಿತ್ಸೆ ನೀಡಿಲ್ಲ ಗಾಯಗದ ಪ್ರಮಾಣ ಪತ್ರ ನೀಡಿಲ್ಲ ಎಂದರೆ ಸರಿಯಲ್ಲ. ಗಾಯಾಳುಗಳಿಗೆ ಸಹಾಯ ಮಾಡಲೆಂದು ಸುಳ್ಳು ಗಾಯದ ಪ್ರಮಣ ಪತ್ರ ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೆ.ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಜೇವರ್ಗಿ